ಹೇಳುವಿರಿ?

ನಾ: ನಾನವಳನ್ನು ಸ್ವತಃ ವಿಚಾರಿಸಿದ್ದೇನೆ. ಅಕ್ಕನ ಒಡವೆ ಬಿಡಿಸಲು ಮಾದಗೋಪಾಲ ಫಂಡ್ ಟ್ರಾನ್ಸ್‌ಫರ್ ಮಾಡಿದ್ದಾನೆ ಎಂದು ಮ್ಯಾನೇಜ್‌ಮೆಂಟ್ ಪ್ರತಿನಿಧಿಯೇ ಹೇಳಿದ್ದಾರೆ.

ಮ್ಯಾ ಪ್ರ: (ತಾಳ್ಮೆ ಕಳೆದುಕೊಂಡು) ಇದು ನಂಬುವಂತದ್ದಲ್ಲ. ಅಪರಾಧ ಮುಚ್ಚಿ ಹಾಕಲು ಕಥೆ ಕಟ್ಟುತ್ತಿದ್ದಾರೆ.

ನಾ: ಸಾವಿತ್ರಮ್ಮನ್ನು ಕರೆಸಿ. ಏನು ನಡೆಯಿತು ಎಂದು ಅವರೇ ಹೇಳುತ್ತಾರೆ. ಅವರನ್ನು ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೊಡಬೇಕು.

ನಾಗೇಂದ್ರಪ್ಪನ ಮಾತಿಗೆ ವಾಮನ ನೀಲೇಶ್ವರ ಒಪ್ಪಿದರು. ಸಾವಿತ್ರಮ್ಮನನ್ನು ವಿಚಾರಣೆಗೆ ಕರೆಸಲು ಅನುಮತಿ ಕೊಟ್ಟರು.

ವಿಚಾರಣೆಗೆ ಮುನ್ನ ನಾಗೇಂದ್ರಪ್ಪ ಸಾವಿತ್ರಮ್ಮನಿಗೆ ಕೇಳಬಹುದಾದ ಪ್ರಶ್ನೆಗಳನ್ನು ತಿಳಿಸಿ ಹೇಳಿ, 'ಧೈರ್ಯವಾಗಿ ಉತ್ತರಿಸು, ತಮ್ಮನ ಭವಿಷ್ಯ ನಿನ್ನ ಕೈಯಲ್ಲಿದೆ' ಎಂದು ಎಚ್ಚರಿಕೆ ಕೊಟ್ಟಿದ್ದರು. ಮ್ಯಾನೇಜ್‌ಮೆಂಟ್ ಪ್ರತಿನಿಧಿ ಸುಳ್ಳು ಹೇಳಿದರೆ ತಮ್ಮನ ಜೊತೆಯಲ್ಲಿ ನೀವೂ ಜೈಲಿಗೆ ಹೋಗಬೇಕಾಗುತ್ತದೆ ಎಂದು ಸಾವಿತ್ರಮ್ಮನನ್ನು ಬೆದರಿಸಿದರು. ಸಾವಿತ್ರಮ್ಮ ಜಗ್ಗಲಿಲ್ಲ.

'ಮಗುವಿಗೆ ಜ್ವರ ಬಂದೇ ಇಲ್ಲ, ಸುಳ್ಳು ಹೇಳುತ್ತಿದ್ದೀರಿ' ಎಂದಾಗ, 'ಮಗುವಿಗೆ ಆಗಾಗ ಹುಷಾರು ತಪ್ಪುತ್ತದೆ. ಆವತ್ತೂ ಜ್ವರ ಬಂದಿತ್ತು' ಎಂದು ವೈದ್ಯರ ಸರ್ಟಿಫಿಕೇಟ್ ತೋರಿಸಿದರು.

'ತಮ್ಮ ಬಾ ಎಂದು ಹೇಳಿದ್ದರೂ ಯಾಕೆ ಬರಲಿಲ್ಲ? ನಿಮಗೆ ಹಡಗಲಿಗೆ ಹೋಗುವ ಉದ್ದೇಶವೇ ಇರಲಿಲ್ಲ' ಮ್ಯಾನೇಜ್‌ಮೆಂಟ್ ಪ್ರತಿನಿಧಿ ಜೋರು ದನಿಯಲ್ಲಿ ಹೇಳಿದರು.

'ಹಡಗಲಿಗೆ ಬಾ ಅಂತ ಹೇಳಿದ್ದ. ಡಾಕ್ಟರಿಗೆ ತೋರ್ಸಿ ನಾಳೆ ಹೋದ್ರಾಯಿತು ಅಂದ್ಕೊಂಡಿದ್ದೆ. ಇಷ್ಟೆಲ್ಲ ಆಗ್ತದೆ ಅಂತ ಗೊತ್ತಿರಲಿಲ್ಲ'.

ಸಾವಿತ್ರಮ್ಮ ಹೆದರದೆ ಸರಿ ಉತ್ತರವನ್ನೇ ಕೊಡುತ್ತಿದ್ದುದರಿಂದ ಮ್ಯಾನೇಜ್‌ಮೆಂಟ್ ಪ್ರತಿನಿಧಿ ಕೈಕೈ ಹಿಚುಕುವಂತಾಯಿತು.

ಚತುರರಾದ ವಾಮನ ನೀಲೇಶ್ವರರಿಗೆ ನಾಗೇಂದ್ರಪ್ಪನ ಚಿತಾವಣೆ ಅರ್ಥವಾಗಿತ್ತು; ಮಾದಗೋಪಾಲನ ಪರಿಸ್ಥಿತಿಯನ್ನೂ ಮನವರಿಕೆ ಮಾಡಿಕೊಂಡಿದ್ದರು.

ಹದಿನೈದು ದಿನಗಳ ನಂತರ ತೀರ್ಪು ಬಂತು. ಸ್ಥಾನ ಮತ್ತು ಸವಲತ್ತಿನ ದುರುಪಯೋಗಕ್ಕಾಗಿ ಮಾದಗೋಪಾಲನ ಇನ್‌ಕ್ರಿಮೆಂಟ್ ಎರಡು ವರ್ಷ ಕಾಲ ತಡೆಹಿಡಿದಿದ್ದರು; ಸಸ್ಪೆನ್ಷನ್ ರದ್ದಾಗಿತ್ತು.

ಮಾದಗೋಪಾಲ ಖುಷಿಯಿಂದ ನಾಗೇಂದ್ರಪ್ಪನಿಗೆ ಫೋನ್ ಮಾಡಿ ಕೃತಜ್ಞತೆಗಳನ್ನು ತಿಳಿಸಿದ್ದ.

'ಆಗಿದ್ದಾಯಿತು. ಒಳ್ಳೇದಾಗಲಿ' ಎಂದು ನಾಗೇಂದ್ರಪ್ಪ ಹಾರೈಸಿದ್ದರು.

ಈ ಪ್ರಕರಣದಿಂದ ಅವರಿಗೆ ಇನ್ನಷ್ಟು ಹೆಸರು ಬಂದಿತ್ತು.

* * *

ಮಾದಗೋಪಾಲ ಇಂದಿರಾ ನಗರ ಬ್ರಾಂಚಿಗೆ ಮ್ಯಾನೇಜರಾಗಿ ಬಂದಿರುವುದು ತಿಳಿದು ನಾಗೇಂದ್ರಪ್ಪ ಖುಷಿಪಟ್ಟು ಖುದ್ದಾಗಿ ಕಾಣಲು ಹೋಗಿದ್ದರು.

ಕ್ಯಾಬಿನ್‌ಗೆ ಹೋದಾಗ ಲ್ಯಾಂಡ್ ಫೋನಲ್ಲಿ ಮಾತಾಡುತ್ತಿದ್ದ ಮಾದಗೋಪಾಲ ನಾಗೇಂದ್ರಪ್ಪನನ್ನು ನೋಡಿ ಕಣ್ಸನ್ನೆಯಲ್ಲಿ ಕೂರಲು ಸೂಚಿಸಿದ. ಹೇಳಿದ ರೀತಿ ಇಷ್ಟವಾಗದಿದ್ದರೂ ತೋರಿಸಿಕೊಳ್ಳದೆ ಎದುರಲ್ಲಿ ಕೂತರು. ಗಹನವಾದ ಜಾಗತಿಕ ಸಮಸ್ಯೆ ಚರ್ಚಿಸುವಂತೆ ಫೋನಲ್ಲಿ ಮುಳುಗಿದ್ದ.

'ಪರಿಚಯ ಇದೆಯಾ?' ಕ್ರಾಡಲಲ್ಲಿ ಫೋನಿಟ್ಟ ನಂತರ ನಗು ಲೇಪಿಸಿಕೊಂಡು ಕೇಳಿದರು. 'ಗೊತ್ತಾಯಿತು. ಈಗ ಎಲ್ಲಿದ್ದೀರಿ?' ಮಾತಲ್ಲಿ ಆತ್ಮೀಯತೆ ಇರಲಿಲ್ಲ.

'ರಿಟೈರ್ ಆಗಿ ಆರು ವರ್ಷವಾಯ್ತು. ಬೆಂಗಳೂರಲ್ಲೇ ಇದ್ದೇನೆ'. 'ಏನಾದರೂ ಕೆಲಸ ಇದೆಯಾ?' ಸಾಲ ಬೇಕಾ ಎನ್ನುವಂತಿತ್ತು. ಮುಖ ನೋಡದೆ ಕಂಪ್ಯೂಟರಿನಲ್ಲಿ ಕಣ್ಣು ಕೀಲಿಸಿ ಮಾತಾಡುತ್ತಿದ್ದ.

ಮಾದಗೋಪಾಲ ತನ್ನನ್ನು ಕಂಡು ಖುಷಿ ಪಡುತ್ತಾನೆ, ಗೌರವ ಕೊಡುತ್ತಾನೆ ಎಂದುಕೊಂಡು ಬಂದಿದ್ದರು ನಾಗೇಂದ್ರಪ್ಪ. ಆತ ಗಮನವನ್ನೇ ಕೊಡದೆ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಅವರ ಲೋಕಾಭಿರಾಮದ ಪ್ರಶ್ನೆಗಳಿಗೆ ಕ್ವಚಿತ್ತಾಗಿಯೇ ಉತ್ತರಿಸುತ್ತಿದ್ದ. ಮಾತಿನಲ್ಲಿ ಆಸಕ್ತಿ ಇಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತಿತ್ತು.

ನಾಗೇಂದ್ರಪ್ಪನಿಗೆ ಹೆಚ್ಚು ಹೊತ್ತು ಇರಲಾಗಲಿಲ್ಲ; ಹೊರಟು ಬಿಟ್ಟರು.

'ಕಾಫಿ ತರಿಸ್ಲಾ?' ಎಂದು ಕೇಳ್ದ. ಬೇಡ ಅಂದೆ. ಇಷ್ಟ ಇದ್ದರೆ ಕೇಳದೇ ತರಿಸಬೇಕಿತ್ತು. ಮಾಡಿದ್ದೆಲ್ಲ ಮರೆತು ಬಿಟ್ಟ' – ನಾಗೇಂದ್ರಪ್ಪ ರಂಗಸ್ವಾಮಿಗೆ ಸಿಟ್ಟಲ್ಲಿ ಹೇಳಿದರು.

'ದ್ರೋಣಾಚಾರ್ಯ ದ್ರುಪದನ ಆಸ್ಥಾನಕ್ಕೆ ಹೋದ ಹಾಗಾಯಿತು' – ಇತ್ತೀಚೆಗೆ ಯೂಟ್ಯೂಬಲ್ಲಿ ಮಹಾಭಾರತ ನೋಡುತ್ತಿದ್ದ ರಂಗಸ್ವಾಮಿ ನಗುತ್ತಾ ಹೇಳಿದರು.

'ಏನು ಹೇಳ್ತಿದೀರಿ? ನಾನೇನು ಅವನ ಹತ್ತಿರ ಸಹಾಯ ಕೇಳಲು ಹೋಗಿದ್ನಾ?'

'ಕಾಲ ಕಳೆದಂತೆ ಸಂಬಂಧಗಳಲ್ಲಿ ಏರಪೇರಾಗುತ್ತದೆ. ನನ್ನ ಪ್ರಕಾರ ನೀವು ಅಲ್ಲಿಗೆ ಹೋಗಿದ್ದೇ ತಪ್ಪು. ಟೈಮಾಯಿತು' ಎಂದು ಎದ್ದರು ರಂಗಸ್ವಾಮಿ.

ಸಣ್ಣಪುಟ್ಟ ವಿಷಯಗಳನ್ನು ಹಚ್ಚಿಕೊಂಡು ಒದ್ದಾಡುವ ನಾಗೇಂದ್ರಪ್ಪನ ಮನಸ್ಸು ಕೆಟ್ಟು ಹೋಗಿತ್ತು. ನಿದ್ದೆ ಬರಲಿಲ್ಲ. ಮಾದಗೋಪಾಲ ಕಣ್ಣೀರು ಕರೆದಿದ್ದು, ಕೆಲಸ ಉಳಿಸಿ ಎಂದು ಸಾವಿತ್ರಮ್ಮ ಬೇಡಿದ್ದು, ವಾಮನ ನೀಲೇಶ್ವರ 'ನೀವು ಅಸಾಧ್ಯವಪ್ಪ' ಎಂದು ಬೆನ್ನು ತಟ್ಟಿದ್ದು, ತನ್ನ ಸಾಧನೆಯನ್ನು ಅಲ್ಲಲ್ಲಿ ಬಣ್ಣಿಸಿದ್ದು, ಮಗ್ಗುಲು ಬದಲಾಯಿಸಿದಂತೆಲ್ಲ ಮುತ್ತಿಕ್ಕೊಳ್ಳುತ್ತಿದ್ದವು.

ಸರಿ ಹೊತ್ತಲ್ಲಿ ಮೊಬೈಲ್ ರಿಂಗಣಿಸಿದ ಶಬ್ದ ಕೇಳಿಸಿತು. ಹೆಸರಿಲ್ಲದ ಕರೆ. ಯಾರೋ ಗೋತಾ ಹೊಡೆದಿರಬೇಕು ಎಂದಂಜುತ್ತಾ ಫೋನ್ ತೆಗೆದರು.

'ನಾಗೇಂದ್ರಪ್ಪನವರಾ?' ಪರಿಚಿತ ಧ್ವನಿ.

'ಯಾರು?'

'ನಾನು ಸಾರ್, ಮಾದಗೋಪಾಲ'.

ಎದುರಿದ್ದಾಗ ಬೇಕಾಬಿಟ್ಟಿ ಆಡಿದವನಿಗೆ ಅಪರಾತ್ರಿಯಲ್ಲಿ ಏನು ಕೆಲಸ ಎಂದೆನಿಸಿದರೂ ಫೋನ್ ಕಟ್ ಮಾಡಲಿಲ್ಲ. ನೌಕರರ ಸಂಘದಲ್ಲಿದ್ದು ಎಲ್ಲ ಕರೆಗಳಿಗೂ ಉತ್ತರಿಸುವ ಚಟ.

ಮಾದಗೋಪಾಲ ಮಾತಾಡುತ್ತಲೇ ಇದ್ದ. ನಾಗೇಂದ್ರಪ್ಪ ಹೂಗುಟ್ಟದೆ ಅವನು ಹೇಳುವುದನ್ನು ಕೇಳಿಸಿಕೊಂಡರು.

ಅಚಾತುರ್ಯದಿಂದ ವಂಚನೆ ಪ್ರಕರಣದಲ್ಲಿ ಸಿಲುಕಿಕೊಂಡಿದ್ದಕ್ಕೆ ಮಾದಗೋಪಾಲನಿಗೆ ಪಶ್ಚಾತ್ತಾಪವಿತ್ತು. ಮೂರ್‍ನಾಲ್ಕು ದಿನದಲ್ಲಿ ಜಮಾ ಆಗುವ ಸಂಬಳದಲ್ಲಿ ಅಕ್ಕನ ಖಾತೆ ಸರಿ ಮಾಡಬಹುದೆಂದು ಆತ ಯೋಚಿಸಿದ್ದ. ಅದರ ನಡುವೆ ಆಗಬಾರದ್ದು ಆಗಿಹೋಗಿತ್ತು. ಅಮಾನತು ರದ್ದಾಗಿ ಬ್ಯಾಂಕಿಗೆ ಬಂದಾಗ ವಾತಾವರಣ ಬದಲಾಗಿತ್ತು. ಜೊತೆಗಿದ್ದವರು ಸಂಶಯದಿಂದ ನೋಡುತ್ತಿದ್ದರು. ಜವಾಬ್ದಾರಿಯ ಕೆಲಸ ಕೊಡುತ್ತಿರಲಿಲ್ಲ. ಕ್ಯಾಷ್‌ನಲ್ಲಿ ಕೂರಿಸುತ್ತಿರಲಿಲ್ಲ. ಸಣ್ಣಪುಟ್ಟ ಕೆಲಸಗಳನ್ನೂ ಎರಡೆರಡು ಸಲ ಪರಿಶೀಲಿಸುತ್ತಿದ್ದರು. ಬೆನ್ನ ಹಿಂದೆ ಕೊಂಕು ಮಾತುಗಳು. ಟ್ರಾನ್ಸ್‌ಫರ್ ತೆಗೆದುಕೊಂಡು ಹೋದಲ್ಲೂ ಅದೇ ಕಥೆ. ಮಾದಗೋಪಾಲ ಬೇಡ ಅನ್ನುವವರೂ ಇದ್ದರು. ರೋಸಿ ಹೋಗಿದ್ದ. ಬ್ಯಾಂಕ್ ಕೆಲಸ ಬಿಟ್ಟರೆ ಬೇರೆ ಗತಿ ಇಲ್ಲ. ಆಗಿದ್ದನ್ನು ಮರೆಯಲೇ ಬೇಕಿತ್ತು. ಕೆಟ್ಟ ನೆನಪುಗಳು ಬಾಧಿಸದಂತೆ ಮನಸ್ಸು ಗಟ್ಟಿ ಮಾಡಿಕೊಂಡ.

ನಾಗೇಂದ್ರಪ್ಪನನ್ನು ಕಂಡಾಗ ಮರೆತಿದ್ದೇನೆ ಅಂದುಕೊಂಡಿದ್ದ ನೋವು, ಹಿಂಸೆ ಅವಮಾನಗಳು ಕಣ್ಮುಂದೆ ಬಂದಂತಾಗಿ ಏನು ಮಾಡಬೇಕೆಂದೇ ಮಾದಗೋಪಾಲನಿಗೆ ತೋಚಲಿಲ್ಲ.

ತನ್ನ ವರ್ತನೆಗೆ ಮಾದಗೋಪಾಲ ನಾಗೇಂದ್ರಪ್ಪನ ಕ್ಷಮೆ ಕೇಳಿದ. ತಾನೇ ಕೇಳಬೇಕಾಗಿತ್ತೇನೋ ಎಂದು ನೊಂದ ನಾಗೇಂದ್ರಪ್ಪ ಮತ್ತೆಂದೂ ಅಗತ್ಯವಿಲ್ಲದೆ ಬ್ಯಾಂಕ್ ಕಡೆ ತಲೆ ಹಾಕಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**